ತಪ್ಪಿಲ್ಲವೇನೊ! ಅಂತೂ ದೇವಪ್ಪನ ಹೋಟೇಲು ಮಲ್ಲೂರಿನಲ್ಲಿ ಹೊಸದಾಗಿಯೇ ಕಟ್ಟಿದವರಂತೆ ಕಂಗೊಳಿಸತೊಡಗಿತು. ಅದನ್ನೆಲ್ಲ ಸರಿ ಮಾಡಬೇಕಾದರೆ ಮೂರ್ನಾಲ್ಕು ತಿಂಗಳೇ ಬೇಕಾದವು. ದೇವಣ್ಣ, ಅವನ ಅವ್ವ ಶಿವವ್ವ, ದುಂಡಪ್ಪ ಮತ್ತು ಶಿವಣ್ಣ ಹಗಲುರಾತ್ರಿ ದುಡಿದರೆಂದೆ ಅದು ನಳನಳಿಸತೊಡಗಿತು. ಮೊದಲಿನ ಚಾದಂಗಡಿಗಿಂತ ಹತ್ತುಪಟ್ಟು ಹೆಚ್ಚು ಚುಲೋ ಮಾಡಿದ ಶ್ರೇಯಸ್ಸು ತಾಯಿಗೆ ಸಲ್ಲಬೇಕೊ? ಮಗನಿಗೆ ಸಲ್ಲಬೇಕೊ? ಶಿವಣ್ಣನಿಗೆ ಸಲ್ಲಬೇಕೊ? ಶಿವಣ್ಣ ಹೋಟೇಲಿನ ಕೆಲಸಗಾರ ಕಮ್ ಸಪ್ಲೈಯರ್ ಆಗಿದ್ದ. ಅಲ್ಲದೆ ದೇವಣ್ಣನ ಹೊಲದ ದೇಖರೇಖಿಯನ್ನೂ ಆತ ಮಾಡುತ್ತಿದ್ದ. ಯಾರು ಹೆಚ್ಚು ದುಡಿದರು? ಯಾರು ಕಡಿಮೆ ದುಡಿದರು ಎಂದು ಹೇಳಲಿಕ್ಕಾಗುತ್ತದೆಯೆ? ಇವರೆಲ್ಲರೂ ಮತ್ತು ಅನೇಕ ಕೆಲಸಗಾರರು ಅದಕ್ಕೆ ದುಡಿದಿದ್ದರಿಂದ ಅದು ಒಂದು ರೂಪ ಪಡೆಯಿತು. ಕೆಲವು ಕಪಾಟುಗಳಿಗೆ ಗೆದ್ದಲು ಹತ್ತಿತ್ತು. ಕಿಟಕಿಗಳು ಸರಿಯಾಗಿ ಕೂಡುತ್ತಿರಲಿಲ್ಲ. ಬಾಗಿಲಿನ ಮರಡು ಮುರಿದಿದ್ದವು ಮತ್ತು ಅದರ ಬೋಲ್ಟ್ ಮತ್ತು ಹಿಂದಿನ ಚಿಲಕ ಸರಿಯಾಗಿ ಕೂಡುತ್ತಿರಲಿಲ್ಲ. ಬಡಿಗೇರ ಮಾನಪ್ಪ ಬಂದು ಅವುಗಳನ್ನು ರಿಪೇರಿ ಮಾಡಿದ.

ಒಂದೊಂದು ಕೆಲಸವೂ ಎಷ್ಟೊಂದು ಕೈ ಹಿಡಿಯುತ್ತದೆ. ಚಳಿಗಾಲದಲ್ಲಿ ಕಿಟಕಿ ಬಾಗಿಲು ಕುಗ್ಗುತ್ತವೆ. ಬೇಸಿಗೆಯಲ್ಲಿ ಹಿಗ್ಗುತ್ತವೆ. ಮನುಷ್ಯರು ಸಹ ಹಾಗೆ ಅಲ್ಲವೆ? ಒಂದು ಸಲ ಕುಗ್ಗುತ್ತಾರೆ, ಮತ್ತೊಂದು ಸಲ ಹಿಗ್ಗುತ್ತಾರೆ. ಸುಖ ದುಃಖಗಳು ಒಂದೇ ರೀತಿಯಲ್ಲಿ ಬರಲು ಹೇಗೆ ಸಾಧ್ಯ? ಆದರೆ ಜೀವನದಲ್ಲಿ ಎಂದೂ ದುಃಖವನ್ನು ಎದುರುಗೊಂಡಿಲ್ಲವೆಂಬಂತೆ ದೇವಣ್ಣ ಇರುವುದನ್ನು ನೋಡಿ ಮಂದಿಗೆ ಮಜಾ ಎನಿಸುವುದು. ಒಮ್ಮೊಮ್ಮೆ ಹೊಟ್ಟೆಕಿಚ್ಚು ಎನಿಸುವುದು. ಅವನು ದೊಡ್ಡದಾಗಿ ನಗುವುದೇನು? ಹೋಟೇಲ್ ಕಟ್ಟೆಯ ಮೇಲೆ ಕುಳಿತು ಜನರನ್ನು ಕರೆಯುವುದೇನು? ಕಂಡಕ್ಟರ್‌ನ ಕೊಲೆ ಆದ ಸಂದರ್ಭದಲ್ಲಿ ಆತ ಎಷ್ಟೊಂದು ಕುಗ್ಗಿ ಹೋಗಿದ್ದ. ಅಳು, ಅಳು ಅಳುವುದೇನು? ಪೋಲಿಸರೆದುರು ದೈನ್ಯತೆಯಿಂದ ನಡೆದುಕೊಂಡಿದ್ದೇನು? ದುಂಡಪ್ಪನ ಬೆಂಬಲ ಸಿಗದಿದ್ದರೆ ಇಷ್ಟೊತ್ತಿಗೆ ಜೈಲಿನಲ್ಲಿ ಕಂಬಿ ಎಣಿಸುತ್ತಿದ್ದ. ದುಂಡಪ್ಪನಾದರೂ ಯಾಕೆ ಇವನನ್ನು ತನ್ನ ಹೊಟ್ಟೆಯಲ್ಲಿ ಹುಟ್ಟಿದ ಮಗನಂತೆ ಕಾಪಾಡುತ್ತಾನೊ ಗೊತ್ತಿಲ್ಲ. ದೇವಣ್ಣ ಸಹ ಅವನಿಗೆ ಒಂದು ರೀತಿ ಆಸರೆ! ಹರೆಯದ ಹುಡುಗರ ಬೆಂಬಲವಿದೆಯೆಂದು ಊರ ಪ್ರಮುಖರು ದುಂಡಪ್ಪನನ್ನು ಪ್ರತಿಯೊಂದಕ್ಕೂ ಆಹ್ವಾನಿಸುತ್ತಾರೆ. ಯಾರ ಶಕ್ತಿ ಎಷ್ಟಿದೆಯೋ ಗೊತ್ತೇ ಆಗುವುದಿಲ್ಲ. ಎಲ್ಲರದೂ ಒಂದು ರೀತಿ ತೋರಿಕೆಯದೆ ಆಗಿದೆ. ಈಗಂತೂ ದೇವಪ್ಪನ ಹೋಟೇಲು ಮೊದಲಿನದನ್ನು ಮೀರಿಸುವಂತಾಯಿತು. ಹಿಂದೊಮ್ಮೆ ಇಲ್ಲಿ ಕೊಲೆಯಾಗಿತ್ತು, ವರ್ಷವಿಡೀ ಇದು ಮುಚ್ಚಿಹೋಗಿತ್ತೆಂದರೆ ಯಾರೂ ನಂಬುವುದಿಲ್ಲ. ನಂಬಲಾರದ ಮತ್ತೊಂದು ಘಟನೆ ಎಂದರೆ ದೇವಣ್ಣ ಒಂದು ದಿನ ತನ್ನ ಬೈಕ್ ಮೇಲೆ ಮಾಯಕ್ಕಳನ್ನು ಕೂಡಿಸಿಕೊಂಡು ಬಂದುದು. ಅವನಿಗಿಂತ ಹತ್ತು ಹದಿನೈದು ವರ್ಷ ಸಣ್ಣವಳಾದವಳು ಅವನೊಂದಿಗೆ ಮದುವೆಗೆ ಒಪ್ಪಿದ್ದಾದರೂ ಹೇಗೆ? ಊರ ಜನ ತಿಂಗಳುಗಟ್ಟಲೆ ತಲೆಕೆಡಿಸಿಕೊಂಡರು.

***

‘ಒಂಟಿ ಹೆಂಗಸು ಅಂದ್ರೆ ಪುಕ್ಕಟೆ ಬಿದ್ದಿರತಾರು ಅಂತ ಬಾಳಷ್ಟು ಗಂಡಸರು ತಿಳ್ಕೊಂಡಿರತಾರು. ನೀ ಹಂಗೇನಾದ್ರೂ ತಿಳಕೊಂಡಿದ್ರ ಮೊದಲೆ ಹೇಳು. ಆ ತರಹ ಭಾವನೆ ನಿನ್ನ ಮನಸ್ಸಿನೊಳಗ ಇದ್ರ ಮೊಟ್ಟಮೊದಲು ಅದನ್ನ ತೆಗೆದುಹಾಕು,’ ಮಾಯಕ್ಕ ಕರಾರು ಮಾಡಿಯೇ ದೇವಣ್ಣನೊಂದಿಗೆ ಮದುವೆಗೆ ಒಪ್ಪಿದ್ದಳು. ಆಕೆ ಹಾಗೆ ಹೇಳಿದಾಗ ಹೆಂಗಸರು ಹೀಗೆ ಮಾತನಾಡಬಹುದೇ ಎಂದು ಅವನಿಗೆ ಆಘಾತ ಆಗಿದ್ದು ನಿಜ. ನಿಧಾನ ಯೋಚಿಸಿದಾಗ ಹಿಂದೆ ಅನಸೂಯೆಯೂ ಇಂತಹ ಮಾತು ಹೇಳಿಯೆ ಹೇಳಿದಳಲ್ಲ? ಒಮ್ಮೊಮ್ಮೆ ಅವಳ ಬಾಯಿಂದ ಎಂಥೆಂಥ ಕೆಟ್ಟ ಬೈಗುಳ. ಅದಕ್ಕೆಂದೆ ಅವ್ವನಿಗೆ ಆಕೆಯನ್ನು ಕಂಡರೆ ಅಷ್ಟಕ್ಕಷ್ಟೆ. ‘ಅಲ್ಲೊ ನನ್ನ ಮಗನೆ, ಅಕೀ ಜೋಡಿ ಹೆಂಗರ ಸಂಸಾರ ಮಾಡ್ತೀಯೊ?’ ಅದಕ್ಕೆ ಉತ್ತರ ಅನಸೂಯೆಯ ಬಾಯಿಯಿಂದಲೇ ಬರುತ್ತಿತ್ತು.

‘ಅತ್ತಿಯವರ, ನಿಮಗ ಸೊಸಿ ಮಾಡಿದ ತಪ್ಪು ಮಾತ್ರ ಕಾಣ್ತಾವು. ಆದರ ಮಗನ ತಪ್ಪು ಮಾತ್ರ ಕಣ್ಣಿಗೆ ಬೀಳಂಗಿಲ್ಲ. ಅಂವ ನನಗ ಗೊತ್ತಾಗಲಾರದಂಗ ರೊಕ್ಕ ಮುಚ್ಚಿಡತಾನು. ಮ್ಯಾಲಿಂದ ಮ್ಯಾಲ ಬ್ಯಾರೆ ಊರಿಗೆ ಎದಕ್ಕ ಹೋಗ್ತಾನ? ಕೇಳ್ರಿ, ಅಂವನ್ನ. ಮೊನ್ನೆ ಜಕಬಾಳ ಊರಾಗ ಸಾಲಿ ಕಾರ್ಯಕ್ರಮಕ್ಕ ಅಡಿಗಿ ಮಾಡಾಕ ಹೋಗಿದ್ನಲ್ಲ? ಅಲ್ಲಿ ಸಿದ್ದವ್ವ ಅಂತ ಮಾಸ್ತರತಿಯನ್ನ ತಡವಿದ್ದಂತ. ಆಕಿ ಎಲ್ಲಾರೆದುರೆ ಇಂವಗ ಮಂಗಳಾರತಿ ಮಾಡಿ ಕಳಿಸಿದ್ಲಂತ.’ ಅವ್ವ ತನ್ನೆಡೆಗೆ ಸಿಟ್ಟಿನಿಂದ ನೋಡಿ ಎದ್ದು ಹೋಗಿದ್ದಳು. ಸೊಸೆಯಿಂದ ಅನಿಸಿಕೊಳ್ಳುವಂತಾಯಿತೆಂದು ಬಹಳ ವ್ಯಥೆಪಟ್ಟಳು. ತಮ್ಮ ಕಾಲ ಹೊರಟುಹೋಯಿತೆಂದು ಅಂಗಳದಲ್ಲಿ ಕುಳಿತು ಮಂದಿಯೆದುರು ನಿಡುಸುಯ್ಯುವಳು.

ಮಾಯಿಗೆ ಬಹಳ ಜಂಬವಿರುವ ಹಾಗೆ ಕಾಣಿಸುತ್ತದೆ. ಯಾವಾಗಲೂ ಅಹಂಕಾರದಿಂದಲೆ ಮಾತನಾಡಿದಂತೆ ತನಗೆ ಕೇಳಿಸುತ್ತದೆ! ಅವಳಿಗೆ ಎಷ್ಟೊಂದು ಸ್ವಪ್ರತಿಷ್ಠೆ. ಮನೆಯಲ್ಲಿ ನೋಡಿದರೆ ಅಷ್ಟಕ್ಕಷ್ಟೆ. ಸ್ಥಿತಿವಂತರೇನೂ ಅಲ್ಲ. ಆದರೂ ಅವಳಿಗೆ ತನ್ನನ್ನು ಕಂಡರೆ ಎಷ್ಟೊಂದು ನಿರ್ಲಕ್ಷ್ಯ. ಎಲ್ಲರೂ ತನ್ನನ್ನು ‘ಸಾಹುಕಾರರೆ’ ಎಂದರೆ ಈಕೆ ‘ದ್ಯಾವಣ್ಣರೆ’ ಎಂದು ಮೊದಲ ಸಲವೆ ತನ್ನ ಅಹಂಕಾರಕ್ಕೆ ಪೆಟ್ಟು ನೀಡಿದಳು. ಆಕೆ ತನ್ನ ಗುಣಧರ್ಮವನ್ನು ಮೊದಲೆ ತಿಳಿಸುತ್ತಿದ್ದಾಳೆ. ಇದು ಒಳ್ಳೆಯದೆ ಆಯಿತು. ಅವಳ ಸ್ವಭಾವ ಕಟ್ಟಿಕೊಂಡು ತನಗೇನಾಗಬೇಕೆಂದು ಅಡುಗೆ ಟೀಮಿನಲ್ಲಿ ಆಕೆಯನ್ನೂ ಸೇರಿಸಿಕೊಂಡೆವು. ವಿಪರ್ಯಾಸವೆಂದರೆ ತಮ್ಮ ಟೀಮಿನಲ್ಲಿ ಎಲ್ಲರೂ ಆಕೆಯನ್ನು ಹೊಗಳುವವರೆ. ಆಕೆಯಲ್ಲಿ ಎಷ್ಟೊಂದು ನಯ, ವಿನಯ, ಸೌಜನ್ಯವಿದೆ ಎನ್ನುತ್ತಾರೆ. ತನ್ನದೆ ಏನೊ ತಪ್ಪಿರಬೇಕು. ತನಗೂ ಎಷ್ಟೊಂದು ಸೊಕ್ಕು ಎಂದು ಆಕೆಯೂ ಯೋಚಿಸಿದ್ದಳಂತೆ.

ಅನಸೂಯೆ ಬಿಟ್ಟು ಹೋದ ಮೇಲೆ ತಾನೀಗ ಹೆಚ್ಚು ಜಾಗೂರಕನಾಗಿದ್ದೇನೆ. ಒಮ್ಮೆಲೆ ಊಟದಲ್ಲಿ ಹರಳು ಕಡಿಯಬಾರದು. ಯಾರ ಬಗ್ಗೆಯೂ ಯಾವುದೆ ಪೂರ್ವಗ್ರಹ ಇಟ್ಟುಕೊಂಡಿರಬಾರದು. ಸುಮ್ಮನೆ ತಪ್ಪೆಣಿಕೆ ಹಾಕಬಾರದು. ಅವಳು ಹೇಳಿದಂತೆ ಕೇಳಿದರೆ ತನ್ನ ಗಂಟೇನು ಹೋಗುತ್ತದೆ? ಹಾಗೆ ತಾನು ಯೋಚಿಸಿದ್ದು ಎಷ್ಟೊಂದು ಒಳ್ಳೆಯದಾಯಿತು. ಬಂಗಾರದಂತಹ ಮಾಯಿ ಸಿಕ್ಕಳು. ಒಂಟಿತನದಿಂದ ಜೀವನಪ್ರೀತಿಯೆಂಬುದು ಮಾಯವಾಗುತ್ತಿದ್ದಾಗ ಮಾಯವ್ವ ಅವನಿಗೆ ಓಯಸಿಸ್ ಸಿಕ್ಕಂತೆ ಸಿಕ್ಕಳು. ಬದುಕಿನ ಸಿಹಿಬುಗ್ಗೆಯಾಗಿ ಬಂದಳು. ಅವಳಂತಹ ಸೌಂದರ್ಯನಿಧಿ ಸಿಕ್ಕಿದ್ದು ತನ್ನ ಅದೃಷ್ಟವಲ್ಲದೆ ಮತ್ತೇನು? ಮಾಯಿಯ ವಿಶ್ವಾಸ ಗಳಿಸಲು ತನಗೆ ಸಾಧ್ಯವಾಯಿತಲ್ಲ! ಆಕೆ ತನ್ನನ್ನು ನಂಬಿದಳಲ್ಲ! ದೇವಣ್ಣನ ಮಾತು ಬೇರೆಯಲ್ಲ, ಬೆಲ್ಲ ಬೇರೆಯಲ್ಲ ಎಂದಳು.

ಮಾಯಿಯ ಪ್ರೀತಿ ನೆನೆದಾಗಲೊಮ್ಮೆ ದೇವಣ್ಣನಿಗೆ ಬೇಡಬೇಡವೆಂದರೂ ಅನಸೂಯೆಯ ನೆನಪಾಗುವುದು. ಆ ಕಲಹ, ಕ್ಲೇಷ, ಕ್ಷೋಭೆ ಕಣ್ಣಮುಂದೆ ಬರುವವು. ಕೊನೆಕೊನೆಗೆ ಅನಸೂಯೆ ತನ್ನ ಮುಖಕ್ಕೆ ಮುಖಕೊಟ್ಟು ಮಾತಾಡಲಿಲ್ಲ. ತನ್ನ ಮುಖ ನೋಡುವುದು ಅವಳಿಗೆ ಅವಮಾನದ ಸಂಗತಿಯಾಗಿತ್ತಂತೆ. ಮಾಯಿ ಮಾತ್ರ ತನ್ನ ಮಾತು ಸಕ್ಕರೆಗಿಂತ ಸವಿಯೆಂದು ನಾಲಿಗೆ ಕಚ್ಚಿದಳು. ಶೇಂಗಾ, ಬೆಲ್ಲ, ಕೊಬ್ಬರಿ, ಎಳ್ಳು ಹಾಕಿ ತಾನು ಮಾಡುತ್ತಿದ್ದ ಪಂಚಕಜ್ಜಾಯವೆಂದರೆ ಅವಳಿಗೆ ಪ್ರಾಣ. ತಮ್ಮ ಅಡುಗೆ ತಂಡದಲ್ಲಿ ಮಾಯಿಯೂ ಸಹಾಯಕಳಾಗಿ ಬರತೊಡಗಿದ ಮೇಲೆಯೆ ಅವಳ ಪರಿಚಯವಾದದ್ದು. ಪರಿಚಯ ಯಾವಾಗ ಪ್ರೀತಿಯತ್ತ ತಿರುಗಿತೊ ಗೊತ್ತೇ ಆಗಲಿಲ್ಲ. ತನ್ನನ್ನು ಆಕೆ ಪ್ರೀತಿ ಮಾಡುವಷ್ಟು ನಂಬಿಕೆಯನ್ನು ಅವಳಲ್ಲಿ ತಾನು ಹುಟ್ಟು ಹಾಕಿದೆನಲ್ಲ! ಅವಳು ತನಗೆ ಒಲಿದಿದ್ದಾಳೆಂದು ತಿಳಿದ ಮೇಲೆ ತನ್ನ ಕಾಲುಗಳು ನೆಲದ ಮೇಲಿರಲಿಲ್ಲ. ಆಕೆಯ ಪ್ರೀತಿಯನ್ನು ತಾನು ಗಳಿಸಿದೆನೆಂದು ತಿಳಿದಾಗ ಎಷ್ಟೊಂದು ಮಂದಿ ತನ್ನ ಮೇಲೆ ಕೆಂಡ ಕಾರಿದರು.

ಆಕೆಯ ಮೊದಲ ಗಂಡ ಮುತ್ತಪ್ಪನಿಗೆ ಹೋಗಿ ಹೇಳಿದರು. ಆತ ತನ್ನನ್ನು ಹೊಡೆಯಲು ಬರುತ್ತಾನೆನ್ನುವ ಸುದ್ದಿ ಬಂದಿತು. ಎಷ್ಟೊಂದು ಮಂದಿ ಅವಳ ಕಿವಿ ಕಚ್ಚಿ ತನ್ನ ವಿರುದ್ಧ ದೂರು ನೀಡಿದರು. ಆದರೆ ಯಾವುದಕ್ಕೂ ಆಕೆ ಮಣಿಯಲಿಲ್ಲ. ಮುಂದೆ ಇಟ್ಟ ಹೆಜ್ಜೆಯನ್ನು ಹಿಂದೆ ಇಡಲಿಲ್ಲ. ತಾನು ಅವನನ್ನು ಮೆಚ್ಚಿಕೊಂಡಿದ್ದೇನೆ, ಮದುವೆಯಾಗುತ್ತೇನೆಂದು ಮನೆಯಲ್ಲಿಯೂ ಹೇಳಿದಳು, ಮಂದಿಯೆದುರೂ ಹೇಳಿದಳು. ಅವನು ತಡವುದಷ್ಟೇ ತಡ ಆಕೆ ಚಿಮ್ಮುತ್ತಿದ್ದಳು,

